doc-149
T.P-2

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 149] ಗುರುವಾರ 14—2—46 [ಬಿಡಿ ಪ್ರತಿ 3 ಪೈ

ಯುದ್ಧಾನಂತರ

ಯುದ್ಧಾನಂತರ ಮತ್ತೊಂದು ಯುದ್ಧಕ್ಕೆ ತಾರಿಯಾಗುತ್ತಿದೆಯೆಂದು ಒಬ್ಬ ಪ್ರಸಿದ್ಧ ಜ್ಯೋತಿಷ್ಯನು ಹಿಂದೆ ಹೇಳಿದ್ದನು. ಯಾರಿಗೆ ಸಿಕ್ಕಿದ್ದಷ್ಟು ಅವರಿಗೆ ಎಂದು ಕಳ್ಳರು ಹಂಚಿಕೊಳ್ಳುವಂತೆ ಪ್ರಭುಗಳೂ ತೊಡೆ ಪಾಲಿಂಕ ಸಿರುವರು. ಹೀಗಿದ್ದಲ್ಲಿ ಪ್ರಪಂಚ ಶಾಂತಿ ಹೇಗೆ ಸಾಧ್ಯವೆ? ಸಮ್ಮಿಶ್ರ ನಾಸ್ತಿಕತೆಯನ್ನು ದೇಶದಲ್ಲೆಲ್ಲಾ ಪ್ರಚಾರಮಾಡಲು ರಷ್ಯಾ, ಪ್ರಪಂಚಾಧಿಪತ್ಯವನ್ನು ಹೊಂದಬೇಕೆಂದು ಅಮೆರಿಕಾ, ಇವೆಲ್ಲರ ತಲೆಯ ಮೇಲೆ ಕೈಯನ್ನಿಡೋಣವೆಂದು ಬ್ರಿಟನ್ನು, ಈ ಬಗೆಯಲ್ಲಿ ಒಬ್ಬರನ್ನೊಬ್ಬರು ವಿಶ್ವಾಸಿದ್ದಾರೆ.

ಪರ್ಯಾವನ್ನು ಸಂಪೂರ್ಣವಾಗಿ ನುಂಗಬೇಕೆಂದು ರಷ್ಯಾ ಆಶಿಸುತ್ತಿದೆ ಯೆಂದೂ ಕೆಲವರು ಅಭಿಪ್ರಾಯಪಡುತ್ತಿರುವರು. ಈ ಸಮಸ್ಯೆಯು ಯಾವಾಗ ಪರಿಷ್ಕಾರವಾಗುವುದೋ ತಿಳಿಯದು.

ಸುಮಾರು ಚೈನಾಗಳಿಗೆ ಸಂಧಿಯಾಗಿದೆ. ಗ್ರೀಸು ಬ್ರಿಟನ್ನಿನವೆಸ ಹಿತ ರಾಜ್ಯವಾಗುವುದೋ ಏನೋ ಎಂದು ಕೆಲವರಿಗೆ ಆಸುಮಾನ.

ಇಂಡೋ ಚೈನಾ ಇಂಡೋ ನೇಷಿಯಾ ಸ್ಥಿತಿಗಳು ಹಿಂದಿನಂತೆಯೇ ಇವೆ. ಎಲ್ಲಾ ವಿಷಯಗಳನ್ನೂ ಪರಿಶೀಲಿಸಿದಲ್ಲಿ ಪ್ರಪಂಚ ಶಾಂತಿಯು ಇನ್ನು ದೃಷ್ಟಿ ಗೋಚರವಾಗುತ್ತಿಲ್ಲ. ವ್ಯಯ ಸಂವತ್ಸರದಲ್ಲಾದರೂ ಕಲಹಗಳು ಪ್ರಜಾನಾಶವೂ ಉಂಟಾದೆಂದು ಪಂಚಾಂಗಗಳು ಹೇಳುತ್ತಿವೆ. ಅಂದರೆ ಶಾಂತಿಯು ಇನ್ನೂ ಬಹಳ ದೂರದಲ್ಲಿದೆಯೆನ್ನಬೇಕಷ್ಟೆ!

ಭಾರತೀಯ ಸೈನಿಕರಿಗೆ ೧೫ ಲಕ್ಷ ಪದಕಗಳು

ನವ ದೆಹಲಿ ಫೆ. 10—ಯುದ್ಧದಲ್ಲಿ ವಿವಿಧ ಸೇವೆ ಸಲ್ಲಿಸಿದವರಿಗೆ ಪದಕಗಳನ್ನು ಕೊಡಲು ಸುಮಾರು 180 ಲಕ್ಷ ತೊಲ ಲೋಹ ಮತ್ತು 200 ಮೈಲಿ ಉದ್ದದಷ್ಟು ರಿಬ್ಬನ್‌ಗಳನ್ನು ಸಿದ್ಧಪಡಿಸಬೇಕೆಂದು ಇಂಡಿಯಾ ಸರ್ಕಾರದವರು ಅಪ್ಪಣೆ ಮಾಡಿದ್ದಾರೆ. ಈ ಸಾರಿ ಪದ್ಧತಿಯ ಪ್ರಕಾರ ಪದಕಗಳ ಮೇಲೆ ಅವನ್ನು ಪಡೆದವರ ಹೆಸರುಗಳನ್ನು ಕೆತ್ತಿಸಲಾಗುವುದಿಲ್ಲ.

ಒಪ್ಪತ್ತು ಊಟವೇ?

ಮದರಾಸು ಫೆ, 1—ಅಕ್ಕಿಯ ಅಭಾವ ಹೆಚ್ಚಾಗಿರುವುದರಿಂದ ಜನರು 1 ಹೊತ್ತು ಊಟಮಾಡಿದರೆ ಅನುಕೂಲವೆಂದು ಪ್ರಕಟಿಸಿರುವುದಾಗಿ ತಿಳಿಯಬಂದಿದೆ.

ಕ್ಯಾಪ್ಟನ್ ಲಕ್ಷ್ಮಿ

ಅಲಹಾಬಾದ್ ಫೆ 11—ಕ್ಯಾಪ್ಟನ್ ಲಕ್ಷ್ಮಿಯವರು ತಾವು ಬರ್ಮಾ ಸರ್ಕಾರದ ಜೈಲಿನಿಂದ ಯಾಗಿ ರುವುದಾಗಿಯೂ, ತಮ್ಮನ್ನು ಸ್ವದೇಶಕ್ಕೆ ಕರೆಸಿಕೊಳ್ಳಲು ಪ್ರಯತ್ನಿಸಬೇಕೆಂದೂ ಭಾರತ ಮುಖಂಡರೆಲ್ಲಾ ಪತ್ರಿಕೆಯವರಿಗೆಲ್ಲಾ ವಿನಂತಿ ಮಾಡಿಕೊಂಡಿರುವರು.

ಸಿಲೋನ್ ಭಾರತೀಯರು

ತಮಗೆ ಅಲ್ಲಿ ಹಕ್ಕು ಬಾಧ್ಯತೆಗಳು ದೊರೆತಿಲ್ಲದಿರುವುದನ್ನು ಖಂಡಿಸಲು ಸಿಲೋನಿನಲ್ಲಿರುವ 7 ಲಕ್ಷ ಭಾರತೀಯರು ಹರ್ತಾಳವನ್ನಾಚರಿಸಿದರು.

ಬಾ ಶಿಬಿರ

ಬೆಂಗಳೂರು, ಫೆ 13 — ಕೆಂಗೇರಿಯಲ್ಲಿರುವ ಶ್ರೀ ಕಸ್ತೂರಿ ಬಾ ಶಿಕ್ಷಣ ಶಿಬಿರದ ಪರಿಸಮಾಪ್ತಿ ಸಮಾರಂಭವು ವಿಜೃಂಭಣೆಯಿಂದ ನಡೆಯಿತು.

ಸೆನೆಟ್ಟಿಗೆ ಸಭೆ

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ವಿಶೇಷ ಮಾರ್ಚ್ ತಾ || 30 ರಲ್ಲಿ ಮೈಸೂರಿನಲ್ಲಿ ನಡೆಯುವುದೆಂದು ತಿಳಿಯಬಂದಿದೆ.

ಕುದುರೆ ಜೂಜಿನ ಸುದ್ದಿ

ಮದರಾಸು ಫೆ 11 . ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸೀಲಗಿರಿಯಲ್ಲಿ ನಡೆಸಬೇಕೆಂದಿದ್ದ ಕುದುರೆ ಜೂಜನ್ನು ಮುನ್ನಾ ಮಾಡಲು ನಿರ್ಧರಿಸಲಾಗಿದೆ ಅದರ ಬದಲು ಮದರಾಸಿನಲ್ಲೇ 3 ದಿನ ಹೆಚ್ಚಾಗಿ ಜೂಜು ನಡೆಸಲು ಪ್ರಯತ್ನಿಸುತ್ತಿರುವುದಾಗಿ ತಿಳಿಯಬಂದಿದೆ.

ಬೊಂಬಾಯಿ, ಫೆ 10 — ಎರಡು ವರ್ಷದ ಒಂದು ಜೂಜಿನ ಕುದುರೆಯು 91 ಸಾವಿರ ರೂ. ಗೆ ಕೊಳ್ಳಲ್ಪಟ್ಟಿದೆ.

ಗಾಂಧೀಜಿಗೆ ಆಗಾಖಾನ್ ಅರಮನೆ!

ಸಿಡುಬಿನ ನಿರೋಧಕ್ಕಾಗಿ

ಈ ತಿಂಗಳು 8 ನೇ ತಾರೀಖಿನವರೆಗೆ 25641 ಜನರಿಗೆ ದೇವೀಹಾಕಿರುವುದಾಗಿ ಪೌಂಜಿಪೆಯ ಆರೋಗ್ಯಾಧಿಕಾರಿಗಳು ತಿಳಿಸುತ್ತಾರೆ.

ಆವಸರದ ಶಂಕುವು

ನವ ದೆಹಲಿ ಫೆ, 13—ಕ್ಯಾ || ಅಬ್ದುಲ್ ರಷೀದಿಗೆ ಏಘಿಸಿರುವ ತೀಕ್ಷ್ಣ ಪ್ರತಿಭಟನೆಯು ನಿನ್ನೆ ಲೀಗ್ ಜನರು ತಾ || 12 ರಲ್ಲಿ ನಡೆಸಿದ ಶಾಂತ ಹರತಾಳ ಮತ್ತು ಪ್ರದರ್ಶನದಲ್ಲಿ ಪೋಲೀಸರು ಕೈಕ್ಕೋಳ ಮತ್ತು ಸರಣಿ ಉಪಯೋಗಿಸಿದ್ದಕ್ಕೆ ವಿಚಾರ ಜರ್ಚೆ ನಡೆಸಲು ವ || ಮಹಮದ್ ನೂಮನ್ ತಂದಿರುವ ಅವಸರದ ಶರಾವು ಚರ್ಚೆಗೆ ಅಸೆಂಬ್ಲಿ ಅಧ್ಯಕ್ಷರು ಅವಕಾಶವಿತ್ತಿರುವರು.

ಆಗಾಖಾನರ ಅರಮನೆಯ ಗಾಂಧೀಯನರಿಗೆ ಬಹುಮಾನವೇ

ಪಾರ್ಥ ಫೆ, 12—ಆಗಾಖಾನರು ಗಾಂಧೀಜಿಯವರನ್ನು ಈ ತಿಂಗಳು 20 ರಲ್ಲಿ ಭೇಟಿ ಮಾಡುವಾಗ ಅವರಿಗೆ ತಮ್ಮ ಅರಮನೆಯನ್ನು (ಈ ಅರಮನೆಯಲ್ಲೇ ಶ್ರೀ ಕಸ್ತೂರಿ ಬಾ ಮತ್ತು ಮಹದೇವ ದೇಸಾಯರೂ ವ್ಯತಿತರಾಗಿದ್ದರು) ಬಹುಮಾನವಾಗಿ ಕೊಡಬಹುದೆಂದು ಹೇಳಲಾಗಿದೆ.

ಆಜಾದರಿಗೆ ಆಹ್ವಾನ

ಕಲ್ಕತ್ತಾ ಫೆ. 12—ವೈಸರಾಯರು ತನ್ಮೊಂದಿಗೆ ಆಹಾರ ಪರಿಸ್ಥಿತಿಯ ವಿಷಯ ಚರ್ಚಿಸಲು ಅಧ್ಯಕ್ಷ ಆಜಾದರಿಗೆ ಇತ್ತಿರುವ ಆಹ್ವಾನವನ್ನು ಆಜಾದರು ಸ್ವೀಕರಿಸಿರುವರು.

ಅಮೇರಿಕಾ ಆಟಂಬ್ಯಾಕ್ಟರಿ

ಲಂಡನ್ ಫೆ, 12—ಅಮೇರಿಕಾದಲ್ಲಿರುವ ಆಟಂ ಫ್ಯಾಕ್ಟರಿಯನ್ನು ಒಬ್ಬ ಬ್ರಿಟಿಷ್ ಅಥವಾ ಯೂರೋಪಿಯನ್ ರಸಾಯನ ಶಾಸ್ತ್ರಜ್ಞನು ನೋಡಿಲ್ಲವೆಂದು ಪ್ರೊ || ಲಾಸ್ಕಿಯವರು ಹೇಳಿರುವುದು ಲಾರ್ಡ್ ರಾಜಕೀಯದಲ್ಲಿ ಅಜ್ಞಾರ್ಯವನ್ನುಂಟುಮಾಡಿದೆ.

ಸೈನ್ಯದಿಂದ ನಿವೃತ್ತರಾದವರಿಗೆ ಪುನರುದ್ಯೋಗ ಕಲ್ಪನೆ

ಮದರಾಸು ಫೆ 12—ಸಹಕಾರ ನೀತಿಯನ್ನನುಸರಿಸಿ ಕಟ್ಟಡ ಕಟ್ಟುವ ಯೋಜನೆಯೊಂದು ಈಗ ತಾನೆ ಮದರಾಸು ಸರ್ಕಾರದಿಂದ ಮಂಜೂರಾಗಿದೆ. ಇದರ ಪ್ರಕಾರ ಸಾವಿರಾರು ಮಂದಿ ನಿವೃತ್ತ ಸೈನಿಕರಿಗೆ ಕೂಲಿ; ಗಾರೆ, ಬಡಿಗಿ ಬಣ್ಣಹಾಕುವುದು ಮುಂತಾದ ಕೆಲಸಗಳು ಸಿಕ್ಕುತ್ತವೆ. ಇವುಗಳಲ್ಲಿ ಶಿಂಕಟ್ಟಡ ಕಟ್ಟುವ ಕೆಲಸಕ್ಕೆ 2- ನೀರಾವರಿ ಕೆಲಸಕ್ಕೆ ಮತ್ತು 1 ರಸ್ತೆ ಮಾಡುವುದಕ್ಕೆ ಎಂದು ಗೊತ್ತಾಗಿದೆ. ಈ ಸಂಸ್ಥೆಗಳಲ್ಲಿ ವಿಶೇಷವಾಗಿ ನಿವೃತ್ತ ಸೈನಿಕರನ್ನೇ ಸೇರಿಸಿಕೊಳ್ಳಲಾಗುವುದು. ಈ ವಿಷಯದಲ್ಲಿ ಹೆಚ್ಚಿನ ವಿವರಗಳನ್ನು ಬಯಸತಕ್ಕವರು ಮದರಾಸಿನ ಸಹಕಾರ ಸಂಘಗಳ ರಿಜಿಸ್ಟ್ರಾರರಿಗೆ ಒದೆಯತಕ್ಕದ್ದು.

ಕಲ್ಕತ್ತಾದಲ್ಲಿ ಗೋಲೀಬಾರ್

ಕಲ್ಕತ್ತಾ ಫೆ, 13—ಮತ್ತೆ ಕಲ್ಕತ್ತಾದಲ್ಲಿ ಗಲಭೆಯಾಗಿ ಪೋಲೀಸರು ಗುಂಡು ಹಾರಿಸಿದರು. ಇಲ್ಲಿಯವರೆಗೆ 17 ಸಾವು 208 ನೋವೂ ಆಗಿರುವುದು. ಕೊಟಾಲಾ ಪ್ರದೇಶದಲ್ಲಿ ವಿಶ್ವವಿದ್ಯಾನಿಲಯದ ಪೋಸ್ಟಾಫೀಸಿಗೆ ಯಾರೋ ಬೆಂಕಿ ಇಟ್ಟರು. ಫೈರ್ ಎಂಜಿನ್ ಸಹಾಯದಿಂದ ಆರಿಸಲಾಯಿತು. ಒಂಗಾಳಾ ಮಾಜೀಮಂತ್ರಿ ಸುಹ್ರವರ್ದಿ ಮತ್ತು ಸುರೇಶಚಂದ್ರಬೋಸರು ಮುಖಂಡತ್ವದಲ್ಲಿ ಒಂದು ಮೈಲಿ ಉದ್ದದ ಒಂದು ಲಕ್ಷ ಜನರ ಸಮೂಹದ ಮೆರವಣಿಗೆ ನಡೆಸಲಾಯಿತು. ಬಸ್ಸುಗಳಲ್ಲಿ ಅಡಗಿಸಿಟ್ಟುಕೊಂಡಿದ್ದವರನ್ನು ಗುಂಡು ಹಾರಿಸಿ ಕೊಲ್ಲಲು ಪೋಲೀಸರಿಗೂ ಮಿಲಿಟರಿಗೂ ಆಜ್ಞೆ ಕೊಡಲಾಗಿದೆ.

ರೈಲ್ವೆ ಅನಾಹುತ

ಫ್ರಾನ್ಸಿನಲ್ಲಾದ ರೈಲ್ವೆ ಅನಾಹುತದಲ್ಲಿ 27 ಮಂದಿ ಮರಣಹೊಂದಿದರೆಂದು ವರದಿಯಾಗಿದೆ.

ರಷ್ಯಾ ಕಾಲಿಟ್ಟಿತು

ಟ್ರಿಯೆಸ್ಟ್ ಫೆ. 12—ಒಳಮಂಗೋಲಿಯಾದಲ್ಲಿ ರಷ್ಯಾ ಸಾಮ್ರಾಜ್ಯಂತರ್ಗತ ರಾಜ್ಯಭಾರ ಸ್ಥಾಪನೆ ಏರ್ಪಾಡುಗಳು ನಡೆಯುತ್ತಿರುವುದೆಂದು ಹೇಳಲಾಗಿದೆ.

ಈಜಿಪ್ಟಿನ ಪರಿಸ್ಥಿತಿ

ಕೈರೋ ಫೆ, 12—ಕೈರೋ ಮತ್ತು ಅಲೆಕ್ಸಾಂಡ್ರಿಯಾದಲ್ಲಿ ಪೋಲೀಸರು ಪದಾರ್ಥ ಪ್ರದರ್ಶನ ಕಾರರ ಮೇಲೆ ಗುಂಡುಹಾರಿಸಿದರು. ಕೆಲವು ಸಾವು ನೋವು ಆಗಿದೆ.

ಹೊಸ ತರಹದ ಅಕ್ಕಿ

ಹಸೀ ಅಕ್ಕಿ, ಕುದುಬಲಕ್ಕಿ ಈ ಎರಡೂ ಈಗ ಇವೆ. ಭತ್ತವನ್ನು ಬೇಯಿಸಿ ಕುಟ್ಟಿದಲ್ಲಿ ಕುದುಬಲಕ್ಕಿಯಾಗುತ್ತವೆ ಅದರೆ ಅವೆರಿಕದವರು ಹೊಸ ಅಕ್ಕಿಯನ್ನು ಕಂಡು ಹಿಡಿದಿರುವರು. ಸೀರಿನಲ್ಲಿ ಲೀಯಿಸದೆ ಆವಿಯ ಪೀಲಿ ಬೇಯಿಸಿದಲ್ಲಿ ಅದುಲ್ಲಿಯ ವಿಟಮಿನ್ನುಗಳು ಒಳಗಿನ ಕಾಳಿಗೆಲ್ಲಾ ಪ್ರಸರಿಸಿ ಕುಟ್ಟಿದಾಗ ಸ್ವಲ್ಪವೂ ನೃಥಾ ಆಗುವುದಿಲ್ಲವಂತೆ. ಈ ಹೊಸ ಮಾದರಿ ಅಕ್ಕಿಯನ್ನು ಅಡಿಗೆ ಮಾಡುವುದು ಸುಲಭವಂತೆ. ತಯಾರಿಸಿದ ಅನ್ನವು ನೋಡಲು ಕೂಡಾ ಸೊಂಪಾಗಿರುವುದಂತೆ. ಅಲ್ಲದೇ ಈ ಬಗೆಯ ಅಕ್ಕಿಯನ್ನು ಎರಡು ವರ್ಷಗಳವರೆಗೆ ಕೆಡದಂತೆ ಇಟ್ಟಬಹುದಂತೆ (ಪ್ರ)

ಮೈಸೂರು ಸಿಟಿ ರೇಷನಿಂಗ್

ನೋಟಿಫಿಕೇಷನ್

No. R I- 60/45-46

ಮೈಸೂರು ಸಿಟಿಯಲ್ಲಿರುವ ಮಹಮ್ಮದೀಯರಿಂದ ನಡೆಸಲ್ಪಡುವ ರೇಷನ್ ಡಿಪೋಗಳು ಮಾತ್ರ ಇದೇ ಮಾಹೆ 15 ನೇ ತಾರೀಖು ಶುಕ್ರವಾರ ಮಧ್ಯಾಹ್ನ 'ಈದ್ ಮಿಲಾದ್' ಪ್ರಯುಕ್ತ ಮುಚ್ಚಲ್ಪಡುತ್ತವೆ

(ಸಹಿ) **ಟಿ. ವಿ- ಕೆಡ್ಡಿ**

ರೇಷನಿಂಗ್ ಆಫೀಸರ್

ತಾ|| 13-2-46 ಮೈಸೂರು

ಹಸ್ತ ಬಿಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

2 nd Week
At Opera —
ಪರಂಜ್ಯೋತಿ
ವಿ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಒಯಿಗೌಡ
ಕೃಷ್ಣ ಮಧುರಂ ಪಾತ್ರದಾರರು

At Ranjit
ANDHERA
ತಾ||15—2 46ರಿಂದ
ತಕದೀರ್

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —
ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು
ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ - ಧಾತುಪುಷ್ಟಿಗೆ
ಸಂಜೀವನ
ಶಕ್ತಿಸುಧಾ
ಬೆಲೆ ಡಬ್ಬಿಗೆ ರೂ. ೧.೪-೦
ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing
L. N. Press
Sriramp st MYSORE